ಕರ್ನಾಟಕ ಸರ್ಕಾರ

**ಅಪರ ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ**

**ಐವಾನ್-ಇ-ಶಾಹಿ ಬಡಾವಣೆ, ಕಲಬುರ್ಗಿ-585102.**

**ಸಂಖ್ಯೆ : ಸಿ3(1)ಪ್ರಾಶಾಶಿ/ವರ್ಗ/22/2017-18** **ದಿನಾಂಕ : 28-10-2019**

**ಜ್ಞಾಪನ**

**ವಿಷಯ :-** 2018-2019 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ/ಸಹಶಿಕ್ಷಕರ/ವಿಶೇಷ ಶಿಕ್ಷಕರ ಅಂತರ್ ಘಟಕ ಪರಸ್ಪರ (Out Of Unit) ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸುವ ಮತ್ತು ಕೌನ್ಸಿಲಿಂಗ್ ವೇಳಾಪಟ್ಟಿ ನಿಗದಿಪಡಿಸುವ ಬಗ್ಗೆ,

**ಉಲ್ಲೇಖ:-**ಮಾನ್ಯ ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಜ್ಞಾಪನ ಸಂಖ್ಯೆ : ಸಿ3(7)/ಪ್ರಾಶಿವರ್ಗ/01/2019-20, ದಿನಾಂಕ : 01-06-2019

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-2019 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ/ಸಹಶಿಕ್ಷಕರ/ವಿಶೇಷ ಶಿಕ್ಷಕರ ಅಂತರ್ ಘಟಕ/ಘಟಕದ ಹೊರಗಿನ ಪರಸ್ಪರ (Out Of Unit) ) ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯನ್ನು ಈ ಕಛೇರಿಯ ವೆಬ್‌ಸೈಟ್ (www.cpigulbarga.kar.nic.in)ನಲ್ಲಿ ಪ್ರಕಟಿಸಲಾಗಿದೆ. ಸದರಿ ಆದ್ಯತಾ ಪಟ್ಟಿಯಲ್ಲಿನ ಶಿಕ್ಷಕರ ಕೌನ್ಸಿಲಿಂಗ್‌ನ್ನು **ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಐವಾನ್-ಇ-ಶಾಹಿ ಬಡಾವಣೆ, ಕಲಬುರ್ಗಿ** ಇಲ್ಲಿ ದಿನಾಂಕ 31-10-2019 ರಂದು ಬೆಳಿಗ್ಗೆ 10-00 ಗಂಟೆಗೆ ನಿಗದಿಪಡಿಸಲಾಗಿದೆ. ಈ ಬಗ್ಗೆ ಶಿಕ್ಷಕರಿಗೆ ಪ್ರತ್ಯೇಕ ಪತ್ರ-ವ್ಯವಹಾರ ಮಾಡಲಾಗುವುದಿಲ್ಲ. ಕೌನ್ಸಿಲಿಂಗ್‌ನಲ್ಲಿ ಅರ್ಹ ಶಿಕ್ಷಕರ ಪ್ರಕರಣಗಳಿಗೆ ಮಾತ್ರ ವರ್ಗಾವಣಾ ಆದೇಶಗಳನ್ನು ಜಾರಿಗೊಳಿಸಲಾಗುವುದು. ಆದ್ದರಿಂದ ಆದ್ಯತಾ ಪಟ್ಟಿಯನ್ವಯ ಕಲಬುರ್ಗಿ ವಿಭಾಗದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರು, ಕೌನ್ಸಿಲಿಂಗ್‌ಗೆ ಬರುವಾಗ ಈ ಕೆಳಕಂಡ ಸೇವಾ ದಾಖಲೆಗಳ ಒಂದು ಸೆಟ್ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು.

1. ವರ್ಗಾವಣಾ ಅರ್ಜಿ ಪ್ರತಿ
2. ಸಕ್ಷಮ ಪ್ರಾಧಿಕಾರದಿಂದ ಪಡೆದ ಸೇವಾ ದೃಢೀಕರಣ ಪತ್ರ (ಭಾವಚಿತ್ರದೊಂದಿಗೆ).
3. ನೇಮಕಾತಿ ಆದೇಶ ಪ್ರತಿ.
4. ವೇತನ ಪ್ರಮಾಣ ಪತ್ರ .
5. ಖಾಯಂಪೂರ್ವ ಸೇವಾವಧಿ ಘೋಷಣಾ ಪತ್ರದ ಆದೇಶ ಪ್ರತಿ
6. ಸೇವಾವಧಿಯಲ್ಲಿ ವರ್ಗಾವಣೆಗೊಂಡ ಎಲ್ಲ ಆದೇಶ ಪ್ರತಿಗಳು.
7. ಅನ್ವಯವಾಗುವ ಇತರೆ ದಾಖಲೆಗಳು.

**(ಟಿ. ನಾರಾಯಣ ಗೌಡ)**
ಸಹನಿರ್ದೇಶಕರು (ಆಡಳಿತ) ಹಾಗೂ
ವರ್ಗಾವಣಾ ಪ್ರಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ.

**ಇವರಿಗೆ:-** ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಕಳುಹಿಸುತ್ತಾ, ಸದರಿ ಜ್ಞಾಪನವನ್ನು ವ್ಯಾಪಕವಾಗಿ ಪ್ರಚುರಪಡಿಸುವಂತೆ ನಿರ್ದೇಶಿಸಿದೆ.